(ಗೊಂದಲ)

ಅಧ್ಯಕ್ಷರು : ಈಗ ಗೃಹ ಸಚಿವರು ಮೇಲ್ಮನೆಯಲ್ಲಿ ಇದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, Home Minister ಅವರು ಬರಲಿ.

ಅಧ್ಯಕ್ಷರು : ಮಾನ್ಯ ಗೃಹ ಸಚಿವರು ಮೇಲ್ಮನೆಯಲ್ಲಿ ಇದ್ದಾರೆ, ಅವರನ್ನು ಸದನಕ್ಕೆ ಕರೆಸೋಣ, ಅವರು ಏನು ವಿಚಾರವನ್ನು ಹೇಳುತ್ತಾರೆ, ಏನು information ಬಂದಿದೆಯೆಂಬುದನ್ನು latest ಆಗಿ ತಿಳಿದುಕೊಳ್ಳೋಣ.

(ಗೊಂದಲ)

ಅಧ್ಯಕ್ಷರು : ಈಗ ಸದನವನ್ನು ಬೆಳಿಗ್ಗೆ ೧೧.೦೦ ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಸಂಜೆ ೫ ಗಂಟೆ ೪೪ ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ : ೦೩ ನೇ ಏಪ್ರಿಲ್ ೨೦೦೭ರ ಮಂಗಳವಾರದಂದು ಬೆಳಿಗ್ಗೆ ೧೧.೦೦ ಗಂಟೆಗೆ ಸೇರಲು ನಿಶ್ಚಯಿಸಿತು)

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : ೧೪೦೭ (೨೨೭೨)

ಸದಸ್ಯರ ಹೆಸರು : ಶ್ರೀ ಚನ್ನಬಸವರಾಜ್ (ಅಪ್ಪಾಜಿ) ಶಂಕರರಾವ್ ನಾಡಗೌಡ (ಮುದ್ದೇಬಿಹಾಳ)

ಉತ್ತರಿಸುವವರು : ಶ್ರೀ ರಾಮಚಂದ್ರ ಗೌಡ (ಯೋಜನಾ ಸಚಿವರು)

ಪ್ರಶ್ನೆ

ಅ) ಪ್ರಾದೇಶಿಕ ಅಸಮತೋಲನ ನಿವಾರಣೆಗಾಗಿ ಡಾ॥ ನಂಜುಂಡಪ್ಪ ವರದಿಯನುಸಾರ ಸರ್ಕಾರ ರೂಪಿಸಿರುವ ಯೋಜನೆಗಳೇನು ;

ಆ) ಉತ್ತರ ಕರ್ನಾಟಕ ಅತ್ಯಂತ ಹಿಂದುಳಿದ ತಾಲ್ಲೂಕುಗಳ ಸಮಗ್ರ ಅಭಿವೃದ್ಧಿಗಾಗಿ ಸರ್ಕಾರದ ಯೋಜನೆಗಳು ಯಾವ ಹಂತದಲ್ಲಿದೆ ;

ಇ) ಶೀಘ್ರ ಅನುಷ್ಠಾನಕ್ಕಾಗಿ ಕ್ರಿಯಾ ಯೋಜನೆಗಳನ್ನು ರೂಪಿಸುವ ಪ್ರಕ್ರಿಯೆಗೆ ಚಾಲನೆ ನೀಡಲಾಗಿದೆಯೇ ?

ಉತ್ತರ

ಅ) ೨೦೦೭–೦೮ನೇ ಸಾಲಿನಲ್ಲಿ ಪ್ರಾದೇಶಿಕ ಅಸಮತೋಲನಾ ನಿವಾರಣಾ ಸಮಿತಿಯು ನೀಡಿರುವ ಶಿಫಾರಸ್ಸಿನ ಅನುಷ್ಠಾನಕ್ಕೆ ಪ್ರತ್ಯೇಕವಾಗಿ ೧೫೭೭.೫೦ ಕೋಟಿ ರೂಗಳನ್ನು ನಿಗದಿಪಡಿಸಿದ್ದು ಈ ಅನುದಾನವನ್ನು ೧೧೪ ತಾಲ್ಲೂಕುಗಳಿಗೆ ೫೦:೩೦:೨೦ ರ ಅನುಪಾತದಲ್ಲಿ ವಿಶೇಷ ಅಭಿವೃದ್ಧಿ ಯೋಜನೆಯನ್ನು ಸಂಬಂಧಪಟ್ಟ ಇಲಾಖೆಗಳಿಂದ ನಿರೀಕ್ಷಿಸಲಾಗಿದೆ.

ಆ) ಉತ್ತರ ಕರ್ನಾಟಕದ ಹಿಂದುಳಿದ ತಾಲ್ಲೂಕುಗಳಿಗೂ ಸಹ ಮೇಲೆ ತಿಳಿಸಿದ ಕಾರ್ಯಕ್ರಮ ಅನ್ವಯವಾಗಲಿದೆ.

ಇ) ಚಾಲನೆ ನೀಡಲಾಗಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : ೧೮೦೮ (೨೩೮೮)

ಸದಸ್ಯರ ಹೆಸರು : ಶ್ರೀ ಚನ್ನಬಸವರಾಜ್ (ಅಪ್ಪಾಜಿ) ಶಂಕರರಾವ್ ನಾಡಗೌಡ (ಮುದ್ದೇಬಿಹಾಳ)